**ದಿನಾಂಕಃ16.01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಪರ ಶ್ರೀ ಎಂ.ಎನ್. ವಕೀಲರಿಂದಃ-**

ವಾದಿಯು ಈ ದಾವೆಯನ್ನು ನಿವೇಶನ 17x80 ಕ್ಕೆ ಸಂಬಂಧಿಸಿದಂತೆ ಹಾಕಿರುತ್ತಾರೆ. ವಾದಿಯು ಈಗ್ಗೆ ಐದು ವರ್ಷದಿಂದ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ. ವಾದಿಯ 17x80 ರ ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಈಗ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಖಾತೆ ಮತ್ತು ಸ್ವಾಧೀನವನ್ನು ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

ನಾನು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿರುತ್ತೇನೆ ಎಂದು ತಿಳಿದುಕೊಂಡಿರುತ್ತೇನೆ. ನನಗೆ ಸೇರಿದ 20x30 ರ ಮನೆ ಇರುತ್ತದೆ. ಸದರಿ ಮನೆಯ ನಿವೇಶನವನ್ನು ನಾನು 1992 ರಲ್ಲಿ ನಾಗರಾಜಪ್ಪರವರಿಂದ ಖರೀದಿ ಮಾಡಿರುತ್ತೇನೆ, ನಂತರ ಮನೆಯನ್ನು ನಿರ್ಮಿಸಿಕೊಂಡಿರುತ್ತೇನೆ. ಸದರಿ ನನ್ನ ಮನೆಯು ನನ್ನ ಹೆಂಡತಿಯಾದ ಪಂಕಜರವರ ಹೆಸರಿನಲ್ಲಿ ಇರುತ್ತದೆ. ಸದರಿ ನನ್ನ ಮನೆಯನ್ನು ನನ್ನ ಹೆಂಡತಿಯ ಒಪ್ಪಿಗೆ ಆಧಾರ ಮೇಲೆ ವರ್ಗಾವಣೆ ಮಾಡಿರುತ್ತೇನೆ. 1992 ರಲ್ಲಿ ನಾನು ಖರೀದಿಸಿದ ನಿವೇಶನ ದ ಖರೀದಿ ಪತ್ರದಲ್ಲಿ ಚಕ್ಕುಬಂದಿಯನ್ನು ನಾನು ನೋಡಿರುತ್ತೇನೆ. ಪೂರ್ವಕ್ಕೆ-ಜಡೆತಿಮ್ಮಣ್ಣನವರ ಹಿತ್ತಲು, ಪಶ್ಚಿಮಕ್ಕೆ-ಷಡಕ್ಷರಿರವರ ಖಾಲಿ ನಿವೇಶನ ಇತ್ತು, ದಕ್ಷಿಣಕ್ಕೆ-ವಾದಿಯ ಗಂಡನಾದ ಗೋವಿಂದಪ್ಪರವರ ಹಿತ್ತಲು ಮತ್ತು ಮನೆ ಇತ್ತು, ಉತ್ತರಕ್ಕೆ-ರಸ್ತೆ ಎಂದು ನಮೂದಿಸಲಾಗಿತ್ತು. ಸದರಿ ಚಕ್ಕುಬಂದಿ ಈಗ ಬದಲಾವಣೆಯಾಗಿರುತ್ತದೆ. ಬದಲಾವಣೆಗೊಂಡ ಚಕ್ಕುಬಂದಿಯನ್ನು ನನ್ನ ತಕರಾರಿನಲ್ಲಿ ನಮೂದಿಸಿರುತ್ತೇನೆ. ಸದರಿ ಚಕ್ಕುಬಂದಿಯನ್ನು ನನ್ನ ಪ್ರಮಾಣಪತ್ರದಲ್ಲಿ ನಮೂದಿಸಿರುತ್ತೇನೋ ಇಲ್ಲವೋ ಎಂದು ಈಗ ನನಗೆ ನೆನಪಿರುವುದಿಲ್ಲ. ನಾನು ನನ್ನ ಹೆಂಡತಿಗೆ ಒಪ್ಪಿಗೆ ಆಧಾರದ ಮೇಲೆ ನನ್ನ

ಮನೆಯನ್ನು ಹಸ್ತಾಂತರಿಸಿರುವುದರ ಬಗ್ಗೆ ನನ್ನ ತಕರಾರಿನಲ್ಲಿ ಅಥವಾ ನನ್ನ ಪ್ರಮಾಣಪತ್ರದಲ್ಲಿ ನಮೂದಿಸಿರುವುದಿಲ್ಲ.

ನಾನು ನಿವೇಶನವನ್ನು ಖರೀದಿಸಿದ ನಂತರ 03–04 ವರ್ಷಗಳಲ್ಲಿ ಮನೆಯನ್ನು ನಿರ್ಮಿಸಿರುತ್ತೇನೆ. ನಾನು ಮನೆಯನ್ನು ನಿರ್ಮಿಸುವಾಗ ಮುನಿಸಿಪಾಲಿಟಿಯಿಂದ ಕಟ್ಟಡ ಪರವಾನಿಗೆಯನ್ನು ಪಡೆದಿರುತ್ತೇನೆ. ನಾನು ಕಟ್ಟಡ ಪರವಾನಿಗೆಯನ್ನು 20x20ರ ನಿವೇಶನಕ್ಕೆ ಪಡೆದಿರುತ್ತೇನೆ. ನನಗೆ ಆಶ್ರಯ ಯೋಜನೆಯಡಿ ಮನೆಯನ್ನು ನಿರ್ಮಿಸಿಕೊಡಲಾಗಿರುತ್ತದೆ. ಆ ಸಮಯದಲ್ಲಿ ನಾನು ಪಡೆದು ಕಟ್ಟಡ ಪರವಾನಿಗೆಯನ್ನಾಗಲಿ, ಆಶ್ರಯ ಯೋಜನೆಯಡಿ ಮನೆಯನ್ನು ನಿರ್ಮಿಸಿದ ಬಗ್ಗೆಯಾಗಲಿ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ.

ನಾನು ಕಂದಾಯವನ್ನು 20x20ರ ನಿವೇಶನಕ್ಕೆ ಪಾವತಿಸುತ್ತಿದ್ದೆ. ಈಗ ನಾನುಪೆಟ್ಟಿಗೆ ಅಂಗಡಿಯನ್ನು ತೆಗೆದು ಅದಕ್ಕೂ ಗೋಡೆ ಹಾಕಿಕೊಂಡಿದ್ದು ಅದು ಈಗ 20x30 ಅಡಿ ಇದ್ದು, ಈಗ 20x30 ಅಡಿಗೆ ಕಂದಾಯವನ್ನು ಪಾವತಿಸುತ್ತಿರುತ್ತೇನೆ. ನನ್ನ ಮನೆ 20x20ಕ್ಕೆ ನಿರ್ಮಿಸಿಕೊಂಡಿದ್ದು, ಉಳಿದ ಜಾಗಕ್ಕೆ ಪೆಟ್ಟಿಗೆ ಅಂಗಡಿಯನ್ನು ಕಟ್ಟಿಕೊಂಡಿರುತ್ತೇನೆ. ಈಗ ನಾನು 20x30ರಲ್ಲಿ ಸ್ವಾಧೀನದಲ್ಲಿ ಇರುತ್ತೇನೆ. ಸಾಕ್ಷಿ ಮುಂದುವರೆದು ನಾನು 10ಅಡಿ ರಸ್ತೆಗೆ ಮನೆಯನ್ನು ನಿರ್ಮಿಸಿಕೊಂಡಿರುತ್ತೇನೆ. ಉಳಿದ 10 ಅಡಿ ನನ್ನ ಮನೆಯ ಹಿಂದೆ ಖಾಲಿ ಜಾಗ ಇರುತ್ತದೆ ಎಂದು ನುಡಿಯುತ್ತಾರೆ.

ನಾನು ಖರೀದಿಸಿದ 20x30 ಜಾಗವನ್ನು ಇದುವರೆಗು ನಾನು ಅಳತೆ ಮಾಡಿಸಿರುವುದಿಲ್ಲ. ಕಟ್ಟಡ ಪರವಾನಿಗೆ ನೀಡುವಾಗ ಇಂಜಿನಿಯರ್ ಸ್ಥಳಕ್ಕೆ ಬಂದು ಸ್ಥಳ ಪರಿಶೀಲಿಸಿ ನಂತರ ಕಟ್ಟಡ ಪರವಾನಿಗೆಯನ್ನು ನೀಡುತ್ತಾರೆ ಎಂದರೆ ಸರಿ. ಸದರಿ ಸಂದರ್ಭದಲ್ಲಿ ಅಳತೆ ಕಾರ್ಯ ಮಾಡಿರುತ್ತಾರೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು

ಕ್ರಯಕ್ಕೆ ಪಡೆದ ಆಸ್ತಿಯನ್ನು ಬಿಟ್ಟು ಬೇರೆ ಆಸ್ತಿಗೆ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ನನ್ನ ಆಸ್ತಿಯ ದಕ್ಷಿಣಕ್ಕೆ ಈಗಲೂ ಸಹ ವಾದಿಯು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ನಾನು ನನ್ನ ಪ್ರತಿವಾದ ಪತ್ರದ ಷೆಡ್ಯೂಲ್ ನಲ್ಲಿ ನನ್ನ ಮನೆಯ ದಕ್ಷಿಣಕ್ಕೆ ಓಣಿ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ನಾನು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುವ ಚಕ್ಕುಬಂದಿ ಸರಿಯಾಗಿದೆಯೋ ಅಥವಾ ಕ್ರಯ ಪತ್ರದ ಚಕ್ಕುಬಂದಿ ಸರಿಯಾಗಿದೆಯೋ ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಪ್ರತಿವಾದಿ ಪತ್ರದಲ್ಲಿ ತಿಳಿಸಿರುವ ಚಕ್ಕುಬಂದಿಯಂತೆ ನನ್ನ ಮನೆಯ ಹಿಂದೆ ನನ್ನ 10 ಅಡಿ ಖಾಲಿ ಜಾಗವಿದ್ದು ಅದರ ಪಕ್ಕ ಗಲ್ಲಿ ಇದ್ದು ಗಲ್ಲಿಯಾದ ನಂತರ ವಾದಿಯ ಮನೆ ಬರುತ್ತದೆ ಎಂದು ನುಡಿಯುತ್ತಾರೆ. ಕ್ರಯ ಪತ್ರದಲ್ಲಿ ಆದ ಚಕ್ಕುಬಂದಿ ತಪ್ಪಾಗಿ ನಮೂದಾಗಿರಬಹುದು, ಆದರೆ ನನ್ನ ಪ್ರತಿವಾದ ಪತ್ರದಲ್ಲಿ ಹೇಳಿರುವುದು ಸರಿಯಾಗಿದೆ ಎಂದು ನುಡಿಯುತ್ತಾರೆ.

ನಾನು ಈಗ್ಗೆ 05–06 ವರ್ಷಗಳ ಇಚೇಗೆ ಇ–ಸ್ವತ್ತನ್ನು ಮಾಡಿಸಿಕೊಂಡಿರುತ್ತೇನೆ. ನಾನು ಇ–ಸ್ವತ್ತನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಡಿ.4 ರ ಇ–ಸ್ವತ್ತಿನಲ್ಲಿ ನನ್ನ ಸ್ವತ್ತಿನ ದಕ್ಷಿಣ ಭಾಗಕ್ಕೆ ಖಾಸಗಿ ಸ್ವತ್ತು ಎಂದು ನಮೂದಾಗಿರುತ್ತದೆ ಎಂದರೆ, ಸಾಕ್ಷಿಯು ಮುನಿಸಿಪಾಲಿಟಿಯವರು ತಪ್ಪಾಗಿ ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿಗೆ ಸಂಬಂಧಿಸಿದಂತೆ ದಕ್ಷಿಣಕ್ಕೆ ಓಣಿ ಇದೆ ಎಂಬುದನ್ನು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ನನ್ನ ಕ್ರಯಪತ್ರದಲ್ಲಿ ಆಗಿರುವ ಚಕ್ಕುಬಂದಿಗೆ ಸಂಬಂಧಿಸಿದಂತೆ ತಪ್ಪುಗಳನ್ನಾಗಲಿ, ನಾನು ಹಾಜರುಪಡಿಸಿರುವ ನಿಡಿ.4 ರ ಇ–ಸ್ವತ್ತಿನಲ್ಲಿ ಆಗಿರುವ ಚಕ್ಕುಬಂದಿಯ ತಪ್ಪುಗಳ ವಿಚಾರವಾಗಿ ತಿದ್ದುಪಡಿ ಮಾಡಲು ಈಗ ಎರಡು ವರ್ಷಗಳ ಹಿಂದೆ ಮುನಿಸಿಪಾಲಿಟಿಗೆ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹಾಜರುಪಡಿಸಿರುವ ನಿಡಿ.2 ಕ್ರಯ ಪತ್ರ ಮತ್ತು ನಿಡಿ.4 ಇ–ಸ್ವತ್ತಿನಲ್ಲಿ ನಮೂದಾಗಿರುವ ಚಕ್ಕುಬಂದಿ ಸರಿ ಇರುವುದಿಲ್ಲ. ಸದರಿ ಅಂಶಗಳನ್ನು ನಾನು

ಪ್ರಮಾಣಪತ್ರದಲ್ಲಾಗಲಿ ಅಥವಾ ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ.

ವಾದಿಯ ಸ್ವತ್ತಿಗೆ ನಾನು ತೊಂದರೆ ನೀಡುತ್ತಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಮತ್ತು ವಾದಿಯ ಗಂಡನಿಗೆ ಕಷ್ಟಪಟ್ಟು ನಿರ್ಮಿಸಿರುವ ಮನೆಗೆ ಸುಖ-ಸುಮ್ಮನೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ನಾನು ಯಾವತ್ತೂ ತಂಟೆ-ತಕರಾರು ಮಾಡಿರುವುದಿಲ್ಲ. ನಾನು ದಾವಾ ಆಸ್ತಿಗೆ ತಂಟೆ-ತಕರಾರು ಮಾಡುತ್ತಿದ್ದೇನೆ ಎಂದು ವಾದಿಯು ಪೊಲೀಸ್ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಕರೆಸಿ ಬುದ್ಧಿ ಹೇಳಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಹೆಂಡತಿ ವಾದಿಯ ಮೇಲೆ ಕಡೂರಿನ ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ-265/2022ರಂತೆ ಒಂದು ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯು ಬಾಕಿ ಇರುತ್ತದೆ ಎಂದರೆ ಸರಿ. ಸದರಿ ದಾವೆಯನ್ನು ವಾದಿಯ ಮೇಲೆ ದಬ್ಬಾಳಿಕೆ ಮಾಡಿ ತೊಂದರೆ ನೀಡುತ್ತಿರುತ್ತಾರೆ ಎಂದು ನೀಡಿರುತ್ತೇವೆ. ಸದರಿ ದಾವೆಯ ವಿಚಾರಗಳು ನನಗೆ ತಿಳಿದಿರುತ್ತದೆ.

**(ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

sd/-

2 ನೇ.ಹೆ.ಪ್ರ.ಿದಃನ್ಯಾ.ದಂ.,ರವರು, ಕಡೂರು.